International Journal of Kannada Research
www.kannadajournal.com

ISSN: 2454–5813
IJKR 2020; 6(3): 86-91
© 2020 IJKR
www.kannadajournal.com
Received: 19-05-2020
Accepted: 22-06-2020

**ಡಾ.ಯಲಗೂರೇಶ ಕುಲಕರ್ಣಿ**
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ
ಸ್ನಾತಕೋತ್ತರ ಕೇಂದ್ರ, ಕೊಪ್ಪಳ.

**Corresponding Author:**
**ಡಾ.ಯಲಗೂರೇಶ ಕುಲಕರ್ಣಿ**
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ
ಸ್ನಾತಕೋತ್ತರ ಕೇಂದ್ರ, ಕೊಪ್ಪಳ.

# ಫಿಲ್ಮ್ & ಐಡಿಯಾಲಜಿ

**ಡಾ.ಯಲಗೂರೇಶ ಕುಲಕರ್ಣಿ**

ಸಿನಿಮಾ ಅತ್ಯಂತ ಪ್ರಭಾವಶಾಲಿ ಸಮೂಹ ಮಾಧ್ಯಮ. ಇದಕ್ಕಿಂತ ಪರಿಣಾಮಕಾರಿಯಾ ಮತ್ತೊಂದು ಮಾಧ್ಯಮ ಈ ಶತಮಾನದಲ್ಲಿ ಹುಟ್ಟಲಿಲ್ಲ. ಒಂದು ದೇಶದ ಜನರ ನಡೆ ನುಡಿಗಳನ್ನು, ವೇಶ ಭೂಷಣಗಳನ್ನು, ಜೀವನ ವಿಧಾನವನ್ನು ಅಷ್ಟೇಕೆ ದೇಶದ ಆಡಳಿತ ವ್ಯವಸ್ಥೆಯನ್ನೇ ಬದಲಿಸಬಲ್ಲಂಥ ಶಕ್ತಿ ಸಿನಿಮಾಕ್ಕಿದೆ. ವೈಜ್ಞಾನಿಕ ಯುಗದ ಅದ್ಭುತ ಸೃಷ್ಟಿಗಳಲ್ಲೊಂದಾದ ಸಿನಿಮಾ ಬಹುಪಯೋಗಿ. ಶಿಕ್ಷಣ ಪ್ರಸಾರದಲ್ಲಿ ಇದು ಮುಖ್ಯ ಪಾತ್ರ ವಹಿಸಬಲ್ಲದು. ಚಲನಚಿತ್ರ ಇತಿಹಾಸ ಚುಟುಕಾದುದು. ಆದರೆ ಇದರ ಕ್ಷೇತ್ರ ವ್ಯಾಪ್ತಿ ವಿಶಾಲವಾಗಿದೆ. ಹುಟ್ಟಿದ ಹತ್ತೇ ವರ್ಷಗಳಲ್ಲಿ ಸಿನಿಮಾ ಜಗತ್ತಿನ ಬಹುಮುಖ್ಯ ಉದ್ಯಮಗಳಲ್ಲಿ ಒಂದಾಯಿತು. ಚಲನಚಿತ್ರದ ವೇಗ ಇದರಿಂದ ತಿಳಿಯಬಹುದು. ಚಲನಚಿತ್ರವು ಇತರ ಕಲೆಗಳಂತೆ ಭಾರತದಲ್ಲಿಯೇ ಅವಿಷ್ಕಾರಗೊಳ್ಳಲಿಲ್ಲ. ಪಶ್ಚಿಮದಲ್ಲಿ ಜನ್ಮ ತಾಳಿದೊಡನೆಯೇ ಅದು 1896 ರಲ್ಲಿ ಬಾರತಕ್ಕೆ ಆಗಮಿಸಿತು. ಮುದ್ರಣ ಕಲೆಗಿಂತ ಹಿಂದಿನ ಸಂವೇದನೆಯುಳ್ಳ ಪಾರಂಪರಿಕ ಹಾಗೂ ಬಹುಮಟ್ಟಿಗೆ ನಿರಕ್ಷರಿಗಳೇ ತುಂಬಿದ ಒಂದು ಸಮಾಜಕ್ಕೆ ವಿದ್ಯುತ್ ಮಾಧ್ಯಮವೊಂದನ್ನು ಪರಿಚಯ ಮಾಡಿಕೊಟ್ಟಂತಾಯಿತು. ಭಾರತದ ಕಲೆ, ಸಂಸ್ಕೃತಿಯನ್ನು ಬಿಂಬಿಸುತ್ತಾ ವಿವಿಧ ಆಯಾಮಗಳನ್ನು ಬಿಂಬಿಸುತ್ತಾ ಭಾರತದಲ್ಲಿ ಚಿತ್ರರಂಗ ಪುಷ್ಕಳವಾಗಿ ಬೆಳೆಯಿತು.

ಎಲ್ಲಾ ಕಲೆಗಳನ್ನು ತನ್ನ ಒಡಲಿನಲ್ಲಿ ತುಂಬಿಕೊಂಡಿರುವ ಸಿನೆಮಾದ ವಿಶಿಷ್ಠ ಸಾಧ್ಯತೆಗಳನ್ನು ತಿಳಿಯಬೇಕು. ಚಿತ್ರ, ನೃತ್ಯ, ಸಂಗೀತ ಮುಂತಾದವು ಭಾಷೆಗಳಾಗಿದ್ದರೂ ಸೂಕ್ಷ್ಮ ಭಾವನಗಳನ್ನು ಅಭಿವ್ಯಕ್ತಪಡಿಸುವುದು ಅವುಗಳಿಂದಾಗದೇ ಕೆಲವೇ ಸೀಮಿತ ಸಂಗತಿಗಳಿಗೆ ಸಂವಾಹಕಗಳಾಗಿದ್ದವು. ಹೀಗಾಗಿ ಪರಿಪೂರ್ಣ ಭಾಷೆಯಾಗಿ ಧ್ವನಿ ಸಂಕೇತಗಳು ಬಳಕೆಯಾಗಲು ಪ್ರಾರಂಭವಾದ ಮೇಲೆ ಇವು ತಮಗಿದ್ದ ಭಾಷೆಯ ಮಾನ್ಯತೆಯನ್ನು ಕಳೆದುಕೊಂಡು ಬರಿಯ ಕಲೆಗಳಾಗಿ ಉಳಿದುಕೊಂಡವು. ಸಿನಿಮಾದ ಹೊಸ ಭಾಷೆ ಈ ಎಲ್ಲ ಕಲೆಗಳನ್ನೂ ತನ್ನಲ್ಲಿ ಅಳವಡಿಸಿಕೊಂಡು, ಅದು ಒಂದು ಹೊಸ ಕಲೆಯಷ್ಟೇ ಆಗಿರದೇ ಒಂದು ಪ್ರಭಾವಶಾಲಿ ಸಮೂಹ ಮಾಧ್ಯಮವಾಗಿ ಮಾರ್ಪಟ್ಟಿದೆ. ಶಾಬ್ಧಿಕ ಭಾಷೆಯನ್ನೂ ತನ್ನ ತೆಕ್ಕೆಯಲ್ಲಿ ಸೇರಿಸಿಕೊಂಡು, ಸಿನಿಮಾ ಉಳಿದೆಲ್ಲಾ ಭಾಷೆ ಮಾಧ್ಯಮಗಳನ್ನೂ ಮೀರಿ ಮೆರೆಯುತ್ತಿದೆ. ಮಾಹಿತಿ, ಮನೋರಂಜನೆ ಮತ್ತು ಶಿಕ್ಷಣ ಹೀಗೆ ಪ್ರಮುಖವಾದ ಸಾಮಾಜಿಕ ಕಾರ್ಯಗಳನ್ನು ಚಲನಚಿತ್ರ ಮಾಡುತ್ತದೆ. ಮಾನವ ಜೀವನ ವಿವಿಧ ಮುಖಗಳನ್ನು, ರಂಗುಗಳನ್ನು ಪ್ರತಿಬಿಂಬಿಸುವ ಮಾಧ್ಯಮವೇ ಚಲನಚಿತ್ರ. ಅನುಭವವನ್ನು ಮಾಧ್ಯಮಗಳ ಮುಖಾಂತರ ಚಿತ್ರಿಸುವುದೇ ಕಲೆ. ಸಿನಿಮಾವೊಂದು ಕಲೆ. ಚಲನಚಿತ್ರಗಳಲ್ಲಿ ವಿವಿಧ ಪ್ರಭೇಧಗಳಿವೆ.

ಸಮೂಹ ಮಾಧ್ಯಮಗಳಲ್ಲಿ ಸಿನಿಮಾ ಒಂದು ಅತ್ಯಂತ ಪರಿಣಾಮಕಾರಿ ಮಾಧ್ಯಮವಾಗಿದೆ. ಎಂತಹವರನ್ನೂ ಆಕರ್ಷಿಸಿ ಸಮ್ಮೋಹನಗೊಳಿಸುವಂತಹ ಮಾಧ್ಯಮ ಚಲನಚಿತ್ರವಾಗಿದೆ. ಚಲನಚಿತ್ರ ವೀಕ್ಷಿಸುವ ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ನೋಡುಗರನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವಂತೆ ಮಾಡುವಂತಹ ಮಾಧ್ಯಮ. ಎಲ್ಲ ಜನ ವರ್ಗದವರನ್ನು ಏಕ ಕಾಲದಲ್ಲಿ ಸೆಳದು ಪರೊವರ್ತಿತಗೊಳಿಸುವಂತಹ ಒಂದು ಸಾಧನಗಳಲ್ಲಿ ಚಲನಚಿತ್ರ ಮಾಧ್ಯಮವೂ ಒಂದಾಗಿದೆ. ಆಧುನಿಕ ಸಮಾಜದಲ್ಲಿ ಚಲನಚಿತ್ರ ಮಾಧ್ಯಮ ಮೂಲಭೂತವಾಗಿ ಒಂದು ಸಮೂಹ ಸಂಪರ್ಕ ಮಾಧ್ಯಮವಾಗಿ ಬೆಳೆದಿದೆ. ಜಗತ್ತಿನ ಎಲ್ಲೆಡೆ ಅಸಂಖ್ಯಾತ ಜನರಿಗೆ ಸಮಾಚಾರ, ಶಿಕ್ಷಣ, ಮನರಂಜನೆ, ಮಾಗದಶನ, ಜಾಹೀರಾತು, ಪ್ರಚಾರ ಮೊದಲಾದ ಸೇವಾ ಸೌಲಭ್ಯಗಳನ್ನು ಚಲನಚಿತ್ರ ಒದಗಿಸುವದರಿಂದ ಇದನ್ನು ಪರಿಣಾಮಕಾರಿ ಸಮೂಹ ಸಂಪರ್ಕ ಮಾಧ್ಯ ಮ ಎಂದು ಹೇಳಲಾಗುತ್ತದೆ. ಚಲನಚಿತ್ರ ಮಾಧ್ಯಮದ ವಿಸ್ಮಯಕಾರಿ ಬೆಳವಣಿಗೆಗೆ ಅನೇಕ ರಾಷ್ಟ್ರಗಳ ಸಿನಿಮಾಸಕ್ತ ವಿಜ್ಞಾನಿಗಳ ಪರಿಶ್ರಮ ಮುಖ್ಯ ಕಾರಣವಾಗಿದೆ. ಚಲನಚಿತ್ರ ಎಂಬ ಸಮೂಹ ಸಂಪರ್ಕ ಮಾಧ್ಯಮವು ಆಂಗ್ಲ ಭಾಷೆಯ

'ಸಿನಿಮಾಟೋಗ್ರಾಫ್' ಎಂಬ ಪದದ ಸಂಕ್ಷಿಪ್ತ ರೂಪ. ಅದು ಗ್ರೀಕ್ ಮೂಲದಲ್ಲಿ (ಕನಿಮಾ) ಚಲನೆ, ಸ್ಥಳಾಂತರ ಎಂಬ ಅರ್ಥಗಳನ್ನು ಹೊಂದಿದೆ. ಸಿನಿಮಾವು ಚಲಿಸುವ ಅಚ್ಚುಗಳ ಒಂದು ದಾಖಲೆ. ಇದು 'ಅಚ್ಚು' ಎಕೆಂದರೆ ನಾವು ಪರದೆಯ ಮೇಲೆ ಕಾಣುವ ಚಲನೆ ತಂತ್ರಜ್ಞಾನದ ಸಹಾಯದಿಂದ ರಾಸಾಯನಿಕವಾಗಿ ಸಂಸ್ಕರಿಸಲ್ಪಟ್ಟ ಫಿಲಂ ಮೇಲೆ ಮೂಡುವ ಅಚ್ಚು. ಚಲನಚಿತ್ರ ಸಾರ ದ್ರವ್ಯಾತ್ಮಕತೆಯಾಗಿದೆ. ಏಕೆಂದರೆ ಒಂದು ಚಲನಚಿತ್ರ ತಯಾರಿಸಲು ಅಗತ್ಯವಾದ ಎಲ್ಲಾ ಯಂತ್ರೋಪಕರಣಗಳು ದ್ರವ್ಯರೂಪ ಹೊಂದಿವೆ. ಪ್ರೇಕ್ಷಕರ ಕಣ್ಣು ಮತ್ತು ಕಿವಿಗಳ ಮೂಲಕವೇ ದ್ರವ್ಯಾತ್ಮಕತೆ ಅವರನ್ನು ಪ್ರವೇಶಿಸುತ್ತದೆ. ಒಂದು ನಿರ್ದಿಷ್ಟ ಸರಣಿಯೊಂದನ್ನು ಚಿತ್ರೀಕರಿಸುವ ಸಂದರ್ಭದಲ್ಲಿ ಚಲನಚಿತ್ರ ನಿರ್ಮಾಪಕರು ಮತ್ತು ನಿರ್ದೇಶಕರು ಅಗತ್ಯವಾದ ವಸ್ತುಗಳನ್ನು ಇದ್ದ ಸಂದರ್ಭದಲ್ಲಿ ಹೊರ ತೆಗೆದು ಪ್ರಕ್ಷಕರಿಗೆ ಅರ್ಥವಾಗುವಂತೆ ಬುದ್ಧಿವಂತಿಕೆಯಿಂದ ಬಳಸಿಕೊಳ್ಳುತ್ತಾರೆ. ವಿವಿಧ ಮೂಲಗಳಿಂದ ಅಗತ್ಯ ವಸ್ತುಗಳನ್ನು ಬಳಸಿಕೊಂಡು ಸಂದರ್ಭೋಚಿತ ವಾಸ್ತವತೆಗಳನ್ನು ಮೂಡಿಸುವಂತಹ ಚಲನಚಿತ್ರ ನಿರ್ಮಾಣಕ್ಕಾಗಿ ಎರವಲು ಪಡೆಯಲಾಗುತ್ತದೆ. ಆದ್ದರಿಂದ ಚಲನಚಿತ್ರವನ್ನು ನಿರ್ಮಿಸುವಾಗ ವೈವಿಧ್ಯಮಯ ವಸ್ತುಗಳು ಮತ್ತು ವಿಷಯಗಳ ಆಗರವನ್ನೇ ಪ್ರೇಕ್ಷಕರು ಕಾಣುತ್ತಾರೆ.

ಚಲನಚಿತ್ರ ಸಮೂಹ ಸಂಪರ್ಕ ಮಾಧ್ಯಮ ಪ್ರೇಕ್ಷಕರ ವಿಭಿನ್ನ ಆಸಕ್ತಿಗಳನ್ನು ಕಥೆ, ಸಂಭಾಷಣೆ, ಹಾಡು, ನೃತ್ಯ ಮೊದಲಾದವುಗಳ ಮೂಲಕ ತಣಿಸುವ ಚುಂಬಕ ಶಕ್ತಿಯನ್ನು ಹೊಂದಿದೆ. ಪೇಕ್ಷಕರನ್ನು ಕೆಲವು ಗಂಟೆಗಳ ಕಾಲ ಭಾವನಾತ್ಮಕವಾಗಿ ಬಂಧಿಸುವ ಶಕ್ತಿಯನ್ನು ಚಲನಚಿತ್ರ ಮಾಧ್ಯಮ ಹೊಂದಿದೆ. ಹೆಸರಾಂತ ಸೋವಿಯತ್ ಚಲನಚಿತ್ರ ನಿರ್ಮಾಪಕ ಪುಡೊವ್ಕಿನ್ ಚಲನಚಿತ್ರ ಮಾಧ್ಯಮದ ಸ್ವರೂಪವನ್ನು ಕುರಿತು ಹೀಗೆ ಅಭಿಪ್ರಾಯಪಟ್ಟಿದ್ದಾರೆ. ' ಸಿನಿಮಾ ಮಾತನಾಡುವ, ನೋಡುವ, ಯೋಚಿಸುವ ಪ್ರಕ್ರಿಯೆಗಳ ಅಪ್ರತಿಮ ಸಮ್ಮಿಲನ ' ಜಗತ್ತಿನಲ್ಲಿ ನಾವು ಕಾಣುವ ಎಲ್ಲ ಅಂಶಗಳನ್ನು ಒಂದು ಹೊಸ ಕಲಾ ಪ್ರಕಾರಕ್ಕೆ ಅಳವಡಿಸಿಕೊಳ್ಳಲು ನಮಗೆ ಸಿಕ್ಕಿರುವ ಅವಕಾಶ. ಸಿನಿಮಾ ಇಲ್ಲಿಯವರೆಗೆ ಮಾನವ ಕುಲ ಕಂಡಿರುವ ಎಲ್ಲ ಕಲಾ ಪ್ರಕಾರಗಳನ್ನು ಹಿಂದಕ್ಕೆ ಹಾಕಿದೆ. ಹಾಗೆಯೇ, ಇನ್ನು ಮುಂದೆ ನಮ್ಮನ್ನು ಅಭಿವ್ಯಕ್ತಿಗೊಳಿಸಲು ಇರುವ ಅತ್ಯುತ್ತಮ ಮಾಧ್ಯಮವೆಂದರೆ ಅದು ಸಿನಿಮಾ. ' ಚಲನಚಿತ್ರ ಸಮೂಹ ಸಂಪರ್ಕ ಮಾಧ್ಯಮ. ವಾಸ್ತವವಾಗಿ ಒಂದು ಸೃಷ್ಟಿ. ಸುಸಂಸ್ಕೃತ ಅಭಿರುಚಿಯ ಹಾಗೂ ಸೌಂದರ್ಯೋಪಾಸನೆಯ ಅಂಶಗಳು ಚಲನಚಿತ್ರ ಮಾಧ್ಯಮಕ್ಕೆ ಒಂದು ಹೊಸ ಆಯಾಮವನ್ನು ತಂದುಕೊಟ್ಟವು. ಚಲನಚಿತ್ರ ಮಾಧ್ಯಮಕ್ಕಿರುವ ಎರಡು ಪ್ರಮುಖ ಗುಣಗಳೆಂದರೆ, ಸಮೂಹವನ್ನು ಪರಿಣಾಮಕಾರಿಯಾಗಿ ತಲುಪುವುದು ಮತ್ತು ಜನರ ಮನಸ್ಸಿನ ಮೇಲೆ ಅದ್ಭುತ ಪರಿಣಾಮ ಉಂಟುಮಾಡುವುದು. ಈ ವಿಶಿಷ್ಟ ಅಂಶಗಳು ಜಗತ್ತಿನಲ್ಲಿ ಈ ಮಾಧ್ಯಮವನ್ನು ಒಂದು ಬೃಹತ್ ವಾಣಿಜ್ಯೋದ್ಯಮವನ್ನಾಗಿ ಬೆಳೆಸಲು ಪ್ರೇರೇಪಿಸಿದವು.

ವಸ್ತು, ಮಂಡನೆ, ಉದ್ದೇಶ, ಸಂದೇಶ ಹೀಗೆ ಅನೇಕ ಅಂಶಗಳನ್ನು ಪ್ರಮುಖವಾಗಿಟ್ಟುಕೊಂಡು ಚಲನಚಿತ್ರದ ತಯಾರಿಕೆ ಆಗುತ್ತದೆ. ಚಲನಚಿತ್ರ ಒಂದು ಮಾಧ್ಯಮವಾಗಿ ಅನೇಕ ವಿಧದಲ್ಲಿ ಬಳಕೆಯಾಗಿದೆ. ಹಾಗೆಯೇ ಅನೇಕ ರೀತಿಯ ಚಿತ್ರ ಕರ್ತರು, ಅನೇಕ ಬಗೆಯ ಪ್ರೇಕ್ಷಕರುಗಳಿಗಾಗಿ, ಅನೇಕ ಪ್ರಯೋಜನಗಳಿಗಾಗಿ ಅನೇಕ ರೂಪದ ಚಿತ್ರಗಳನ್ನು ಮಾಡುತ್ತಿದ್ದಾರೆ. ಕಾದಂಬರಿ ಅಥವಾ ಕಥೆಯ ಹಾಗಿರುವ ಚಲನಚಿತ್ರ ಸಿದ್ಧಾಂತ ಸ್ಥಾಪಿಸುವ ಚಿತ್ರ. ವರದಿ ಮಾಡುವ ಹಾಗೂ ದಾಖಲು ಮಾಡುವ ಚಿತ್ರ, ಪಠ್ಯ ಇಲ್ಲವೇ ಉಪನ್ಯಾಸ ಎನಿಸಕೊಳ್ಳಬಹುದಾದ ಚಿತ್ರ, ಉಪದೇಶಾತ್ಮಕ ಚಿತ್ರರೂಪದ ಭೂಗೋಲ, ಮಾನವಶಾಸ್ತ್ರ, ವಿಜ್ಞಾನ ಇತ್ಯಾದಿ. ಸಂಗ್ರಹ ರೂಪದ ಚಿತ್ರಗಳು ಚಿತ್ರಕಾವ್ಯ ಮುಂತಾಗಿ ಅಸಂಖ್ಯ ರೂಪಗಳಿವೆ.

**ಪ್ರಮುಖ ಚಲನಚಿತ್ರ ಸಿದ್ಧಾಂತಗಳು**

1. ಅಪರಟಸ್ ಸಿದ್ಧಾಂತ
2. ಆಟೆಯೂರ್ ಸಿದ್ಧಾಂತ
3. ಫೆಮಿನಿಸ್ಟ್ ಸಿದ್ಧಾಂತ
4. ಫಾರ್ಮಲಿಸ್ಟ್ ಸಿದ್ಧಾಂತ
5. ಮಾರ್ಕಸಿಸ್ಟ್ ಸಿದ್ಧಾಂತ
6. ಸೈಕೋ ಅನಾಲಿಟಿಕಲ್ ಸಿದ್ಧಾಂತ
7. ಸೋಷಲಿಸ್ಟ್ ರಿಯಾಲಿಸಂ ಸಿದ್ಧಾಂತ
8. ಸ್ಕ್ರೀನ್ ಥಿಯರಿ ಸಿದ್ಧಾಂತ
9. ಸ್ಟ್ರಕ್ಚರಿಲಿಸ್ಟ್ ಥಿಯರಿ ಸಿದ್ಧಾಂತ

**1) ಅಪರಟಸ್ ಸಿದ್ಧಾಂತ (ಂಠಿಠಿಚಿಡಿಚಿಣಗಿ)**

ಈ ಸಿದ್ಧಾಂತವು ಭಾಗಶಃ ಮ್ಯಾರ್ಕ್ಸಿಸ್ಟ್, ಸೆಮಿಯಾಟಿಕ್ಸ್ ಮತ್ತು ಸೈಕೋ ಅನಾಲಿಸಿಸ್ ಸಿದ್ಧಾಂತಗಳಿಂದ ರೂಪಿತಗೊಂಡು 1970 ರಲ್ಲಿ ಪ್ರಮುಖ ಚಲನಚಿತ್ರ ಸಿದ್ಧಾಂತವಾಗಿತ್ತು. ಈ ಸಿದ್ಧಾಂತದ ಪ್ರಕಾರ ಚಲನಚಿತ್ರವು ಮೂಲತಃ ಆದರ್ಶಕವಾಗಿದ್ದುಕ್ಯಾಮರಾ ಮತ್ತು ಸಂಕಲನದ ಮುಖಾಂತರ ಯಾಂತ್ರಿಕವಾಗಿ ಪ್ರತಿನಿಧಿಸುವುದು. ಜಾಕ್ವಸ್ ಲಕಾನ್ ಲೂಯಿ ಆಲ್‌ಥೂಸರ್, ಜೀನ್, ಲೂಯಿ ಬ್ಯಾಡಿ, ಕೊಮೊಲಿ, ಕ್ರಿಸ್ಟಿಯನ್, ಮಟ್ಸ್, ಲಾರಾ, ಮುಲ್ವಿ, ಪೀಟರ್ ವುಲನ್, ಕೊನ್ಸ್ಟಾನ್ ಪೆನ್ಲಿ, ಇದರ ಸಿದ್ಧಾಂತಕರು.

**2) ಆಟೆಯೂರ್ ಸಿದ್ಧಾಂತ (ಂಣಣಜಣಡಿ)**

1950 ಈ ಸಿದ್ಧಾಂತದ ಪ್ರಕಾರ ಚಲನಚಿತ್ರ ನಿರ್ದೇಶನ ವೈಯಕತಿಕ ಸೃಜನ ಕಲ್ಪನೆಯು ತನ್ನ ಚಿತ್ರದಲ್ಲೂ ಪ್ರತಿಬಿಂಬಿಸುತ್ತದೆ. ಕೆಲವು ಚಿತ್ರಗಳಲ್ಲಿ ನಿರ್ಮಾಪಕರ ಪರಿಕಲ್ಪನೆ ಇರುತ್ತದೆ ಎಂದು ಈ ಸಿದ್ಧಾಂತದ ಪ್ರಕಾರ ಚಿತ್ರ ರಚನೆಕಾರ ಚಿತ್ರದ ಕತೃ ಹಾಗೂ ಅದರ ಸಂಪೂರ್ಣ ಗ್ರಂಥಸಾಮ್ಯ ಅವನಲ್ಲಿರುತ್ತದೆ.

**3) ಫೆಮಿನಿಸ್ಟ್ ಸಿದ್ಧಾಂತ**

ಈ ಸಿದ್ಧಾಂತವು ಸ್ತ್ರೀವಾದ, ಇಲ್ಲವೇ ಸ್ತ್ರೀ ರಾಜಕೀಯದಿಂದ ರೂಪಗೊಂಡ ಅಂಗ. ಈ ಸಿದ್ಧಾಂತಕರು, ಸಿನಿಮಾ ಕೃತಿಯನ್ನು ಹಲವು ಮಾರ್ಗಗಳಿಂದ ಮೌಲ್ಯಮಾಪನ ಮಾಡುತ್ತಾರೆ. ಚಿತ್ರದಲ್ಲಿ ಮಹಿಳಾ ಪಾತ್ರದಾರಿಗಳ ಸಮಾಜದಲ್ಲಿ ದೊರಕಿದ ವಿಮರ್ಶೆ ಇತ್ಯಾದಿ ಅಡಕವಾಗಿದೆ.

**4) ಫಾರ್ಮಲಿಸ್ಟ್ ಸಿದ್ಧಾಂತ**

ಈ ಸಿದ್ಧಾಂತವು ಬಹಳ ಸಂಪ್ರದಾಯಕ ಅಂಶಗಳ ಕುರಿತು ಅಥವಾ ತಾಂತ್ರಿಕ ಅಂಶಗಳ ಮೇಲೆ ಕಂದ್ರೀಕೃತವಾದದ್ದು. ಅಂದರೆ ಚಿತ್ರದ ಬೆಳಕು, ಧ್ವನಿ, ಹಾಡು, ದೃಶ್ಯ ವಿನ್ಯಾಸ, ಬಣ್ಣಗಳ ಬಳಕೆ, ಚಿತ್ರಿಕೆ ಮತ್ತು ಸಂಕಲನ ಇತ್ಯಾದಿಗಳ ಕುರಿತು ಅಧ್ಯಯನ. ಇದು ಇಂದಿನ ಪ್ರಮುಖ ಸಿದ್ಧಾಂತವಾಗಿದೆ.

**5) ಮಾರ್ಕಸಿಸ್ಟ್ ಸಿದ್ಧಾಂತ**

ಇದು ಬಹಳ ಪ್ರಾಚೀನ ಚಲನಚಿತ್ರ ಸಿದ್ಧಾಂತಗಳಲ್ಲಿ ಒಂದು. ಸೆರಗಿ ಐಸ್ಟೀಇನ್ ಹಾಗೂ ಇತರ ಸೋವಿಯತ್ ಚಿತ್ರ ನಿರ್ಮಾಪಕರು ಮಾರ್ಕ್ಸಿಸ್ಟ್ ವಾದಗಳನ್ನು 1920 ರಲ್ಲಿ ಚಲನಚಿತ್ರಗಳ ಮೂಲಕ ವ್ಯಕ್ತಪಡಿಸಿದರು.

**6) ಸೈಕೋ ಅನಾಲಿಟಿಕಲ್ ಸಿದ್ಧಾಂತ**
ಈ ಸಿದ್ಧಾಂತದ ಪರಿಕಲ್ಪನೆಯನ್ನು ನಾನಾರೂಪದಲ್ಲಿ ಚಲನಚಿತ್ರಕ್ಕೆ ಅನ್ವಯಿಸಲಾಗಿತ್ತು. ಫ್ರೆಂಚ್ ಸೈಕೋ ಅನಾಲಿಸ್ಟ್ ಮತ್ತು ಬರಹಗರನಾಗಿದ್ದ ಜಾಕ್ಯುಸ್ ಲಕಾನ್ ನ ಪರಿಕಲ್ಪನೆ ಆಧಾರಿತ ಸಿದ್ಧಾಂತವು 1970 ಮತ್ತು 1980 ರಲ್ಲಿ ಬೆಳೆಯಿತು. ಈ ಸಿದ್ಧಾಂತವು ಚಲನಚಿತ್ರ ನೋಡಿದಾಗ ಉಂಟಾಗುವ ಅನುಭವದ ಮೇಲೆ ಮೂಡಿ ಬಂದಿದೆ. ಇಲ್ಲಿ ಪ್ರೇಕ್ಷಕ ತೆರೆಯ ಮೇಲಿನ ವಸ್ತುವನ್ನು ವೀಕ್ಷಿಸುವ ವಿಷಯಾಧಾರಿತ ನೋಟದ ಒಂದು ವಸ್ತು ಆಗಿರುತ್ತದೆ.

**7) ಸೋಷಲಿಸ್ಟ್ ರಿಯಾಲಿಸಂ ಸಿದ್ಧಾಂತ**
ಈ ಸಿದ್ಧಾಂತವು ಸಾಮಾಜಿಕ ಅಭ್ಯುದಯದ ಪ್ರಕ್ರಿಯೆಯಲ್ಲಿ ಕಾಳಜಿಯುಳ್ಳದ್ದಾಗಿದ್ದು, ಅಂತಹ ಪ್ರಯತ್ನಗಳನ್ನು ಪ್ರೇರೇಪಿಸುವುದನ್ನು ಹಾಗೂ ಉತ್ತೇಜಿಸುವುದನ್ನು ಯಶಸ್ವಿ ಕಲಾ ರೂಪಕಗಳು ಎಂದು ಗುರುತಿಸುತ್ತದೆ.

**8) ಸ್ಕ್ರೀನ್ ಥಿಯರಿ ಸಿದ್ಧಾಂತ**
ಇದು 1970 ರ ಬ್ರಿಟಿಷ್ ನಿಯತಕಾಲಿಕ ಸ್ಕ್ರೀನ್‌ನೊಡನೆ ಮಾರ್ಕ್ಸಿಸ್ಟ್ ಚಲನಚಿತ್ರ ಸಿದ್ಧಾಂತ. ಈ ಸಿದ್ಧಾಂತದ ಪ್ರಕಾರ ನೋಟ ಪ್ರೇಕ್ಷಕನನ್ನು ಸೃಷ್ಟಿಸುವುದೇ ವಿನಃ ಪ್ರೇಕ್ಷಕ ನೋಟವನ್ನು ಅಲ್ಲ.

**9) ಸ್ಟ್ರಕ್ಚರಲಿಸ್ಟ್ ಥಿಯರಿ ಸಿದ್ಧಾಂತ**
ಈ ಸಿದ್ಧಾಂತವು ಚಲನಚಿತ್ರ ಮಾಧ್ಯಮವು ಹೇಗೆ ಸಂಕೇತ ಮತ್ತು ಸಂಪ್ರದಾಯಗಳನ್ನು ಬಳಸಿ ಸಂವಹನವನ್ನು ನಡೆಸುತ್ತದೆ,ಇದು ಶಾಬ್ದಿಕ ಭಾಷೆಗಿಂತ ಭಿನ್ನವಾಗಿರುತ್ತದೆ ಎಂಬ ಅಂಶವನ್ನು ಒತ್ತಿ ಹೇಳುತ್ತದೆ. ಒಂದು ಸನ್ನಿವೇಶಕ್ಕೆ ಪೂರಕವಾದ ಇತರೇ ಅಂಶಗಳಾದ ಬೆಳಕು, ಕೋನ, ಚಿತ್ರಿಕೆಯ ಕಾಲಾವಧಿ, ಸಾಂಸ್ಕೃತಿಕ ಪ್ರಸ್ತುತತೆ, ಹೇಗೆ ಅನೇಕ ವಿಷಯಗಳು ಹೇಗೆ ಒಂದು ಅರ್ಥವನ್ನು ಕೊಡುವುದು ಇಲ್ಲವೇ ಸನ್ನಿವೇಶವನ್ನು ತಿಳಿಗೊಳುವುದು ಎಂಬುದರ ಬಗ್ಗೆ ಹೇಳುತ್ತದೆ.
ಚಲನಚಿತ್ರ ಉದ್ದೇಶಗಳನ್ನು ಪರೀಶೀಲಿಸಿದರೆ, ಚಲನಚಿತ್ರಗಳನ್ನು ಅನಕಾನೇಕ ಪ್ರಯೋಜನಗಳಿಗಾಗಿ ನಿರ್ಮಿಸಬಹುದಾಗಿದೆ. ಇದರ ಕುರಿತು ಕೂಲಂಕುಶ ಪಟ್ಟಿಯನ್ನೇ ತಯಾರಿಸಬಹುದಾಗಿದೆ. ಉದಾಹರಣೆಗೆ,

1. ಕಾಲ್ಪನಿಕವಾಗಿದು, ಖುಷಿ ಕೊಡುವ ಅಥವಾ ತಿಳಿವು ಹುಟ್ಟಿಸುವ ಮತ್ತು ಮನೋರಂಜನೆಯನ್ನು ಒದಗಿಸುವುದು.
2. ಸೌಂದರ್ಯಾನುಭವವನ್ನು ಉಂಟುಮಾಡುವ ಕಲಾಕೃತಿಗಳನ್ನು ಸೃಷ್ಟಿಸುವುದು ಇನ್ನೊಂದು ಉದ್ದೇಶ.
3. ರಾಜಕೀಯ ಅಥವಾ ಇನ್ನಾವುದೋ ಪ್ರಚಾರವನ್ನು ಸಾಧಿಸುವುದು.
4. ಐತಿಹಾಸಿಕ ಘಟನೆಗಳನ್ನು ದಾಖಲಿಸಿ, ಸಂಗೋಪಿಸಿ ಇಟ್ಟುಕೊಳ್ಳುವುದು.
5. ಯಂತ್ರಗಳು, ಸಾಧನ ಸಲಕರಣೆಗಳು, ಶಸ್ತ್ರಾಸ್ತ್ರಗಳು ಇತ್ಯಾದಿ ಬಳಸುವ ಬಗ್ಗೆ ಶಿಕ್ಷಣ ನೀಡುವುದು.
6. ವಿಜ್ಞಾನಗಳಿಗೆ ಹಾಗೂ ತಂತ್ರಜ್ಞರಿಗೆ ಹೊಸದಾಗಿ ಆಗುತ್ತಿರುವ ಶೋಧ ಮತ್ತು ತಾಂತ್ರಿಕ ಬೆಳವಣಿಗೆಗಳ ಬಗ್ಗೆ ಮಾಹಿತಿ ಕೊಡುವುದು.
7. ಮಾನವ ಸಂಪರ್ಕದಿಂದ ಸಾಧ್ಯವಾಗುವಂತಹ ಮತ್ತಾವುದೇ ಪ್ರಯೋಜನವನ್ನು ಸಾಧಿಸುವುದು.

ಹೀಗೆ ಹತ್ತು ಹಲವು ಉದ್ದೇಶಗಳಿಂದ ಚಲನಚಿತ್ರ ತಯಾರಿಕೆಯಾಗುತ್ತದೆ. ಸಿನಿಮಾ ಒಂದು ಕಲೆ. ಚಲನಚಿತ್ರಗಳಲ್ಲಿ ವಿವಿಧ ಪ್ರಭೇಧಗಳಿವೆ. ವಸ್ತು, ಮಂಡನೆ, ಉದ್ದೇಶ, ಸಂದೇಶ ಹೀಗೆ ಅನೇಕ ಅಂಶಗಳನ್ನು ಪ್ರಮುಖವಾಗಿಟ್ಟುಕೊಂಡು ಚಲನಚಿತ್ರದ ತಯಾರಿಕೆ ಆಗುತ್ತದೆ. ಚಲನಚಿತ್ರ ಪ್ರಭೇಧ ಎಂಬ ಪದವು ಇಂಗ್ಲೀಷಿನ ಜಾನರ್ ಎಂಬ ಪದವು ಫ್ರೆಂಚ್‌ನಿಂದ ಬಂದಿದೆ. ಅಂದರೆ ವಿಧ, ವರ್ಗ, ಪ್ರಭೇಧ, ಇತ್ಯಾದಿ ಎಂದು ಅರ್ಥ. ಭೌಗೋಳಿಕವಾಗಿ ಅಂಗೀಕೃತವಾದದ ಕೆಲವು ಚಲನಚಿತ್ರತ ಪ್ರಬೇಧಗಳಿವೆ. ಅವು, ಸಂಗೀತ, ಹಾಸ್ಯ, ಅಪರಾಧ, ಭಯಾನಕ, ಅಹಿಂಸೆ, ವಿಜ್ಞಾನ, ಕಾಲ್ಪನಿಕ ಕಥೆ, ಕಲಾತ್ಮಕ ಚಲನಚಿತ್ರ ಇತ್ಯಾದಿ. ಪ್ರತೀ ವರ್ಗ ಅಥವಾ ಪ್ರಬೇಧಕ್ಕೂ ತನ್ನದೇ ಆದ ಸಂಪ್ರದಾಯ, ಮಂಡನೆ, ಶೈಲಿ, ಇರುತ್ತದೆ. ಇದಕ್ಕೆ ಚಿತ್ರ ನಿರ್ಮಾಪಕ ಮತ್ತು ಪ್ರೇಕ್ಷಕ ಇಬ್ಬರೂ ಒಪ್ಪಿರುವ ಸಂಸ್ಕೃತಿ ಇರುತ್ತದೆ. ಇಂತಹ ಪರಂಪರೆ ಇಲ್ಲದ ಕಲೆಗಳು ಕಲೆಗಳಾಗುವುದಿಲ್ಲ. ರಾಬಿನ್‌ವುಡ್ ಎಂಬುವರು "ಹೋವರ್ಡ್ ಹಾಕ್ಸ್" ಎಂಬ ತನ್ನ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ. "ಎಲ್ಲಾ ಶ್ರೇಷ್ಠ ಕಲೆಗಳೂ ಒಂದು ಬಲಿಷ್ಠವಾದ ಮತ್ತು ಪರಿಚಯದ ಪ್ರಬೇಧ ತಳಹದಿಯ ಮೇಲೆ ನಿಂತಿರುತ್ತದೆ." ಷೇಕ್ಸ್‌ಪೀಯರ್‌ನ ನಾಟಕಗಳು, ಮೊಸಾರ್ಟ ಸಿಂಪೋನಿ ಮತ್ತು ರಿನಯ್‌ಸಾನ್ಸ್ ಕುಂಚಕಲೆಗಳು ಇದಕ್ಕೆ ಉದಾಹರಣೆಗಳು "ಜೇಕಬ್ ಜೆ, ಸ್ರಾಂಪಿ ಚಲನಚಿತ್ರ ಪ್ರಗರಬೇಧಗಳ ಬರೆಯುತ್ತಾ" ಚಲನಚಿತ್ರಗಳ ವೈವಿಧ್ಯತೆಯ ಅದರ ಜನಪ್ರೀಯತೆಗೆ ಕಾರಣ. ಎಲ್ಲಾ ವರ್ಗ ಪ್ರೇಕ್ಷಕರ ಅಭಿರುಚಿಗೆ ತಕ್ಕುದಾಗಿ ಚಿತ್ರಗಳನ್ನು ತಯಾರಿಸಿರುತ್ತಾರೆ. ಪ್ರಮುಖವಾಗಿ ಚಲನಚಿತ್ರಗಳನ್ನು ಇಂತೀ ಗುಂಪು ಇಲ್ಲವೇ ವರ್ಗಗಳಾಗಿ ವಿಂಗಡಿಸಬಹುದು.

**ಚಲನಚಿತ್ರ ವರ್ಗಗಳು**

1. ಸ್ಲಾಪ್ ಸ್ಟಿಕ್ಸ್
2. ಕಾಮೆಡೀಸ್
3. ವೆಸ್ಟ್ರ್ನ್
4. ಗ್ಯಾಂಗಸ್ಟರ್
5. ಮ್ಯೂಸಿಕಲ್
6. ಥ್ರಿಲ್ಲರ್ಸ್
7. ಎಸ್ಪಿಯೋನೇಜಸ್
8. ಸೈನ್ಸ್ ಫಿಕ್ಷನ್
9. ಚಿಲ್ಡ್ರನ್ಸ್
10. ನ್ಯೂಸ್ ಮತ್ತು ಡಾಕುಮೆಂಟರಿ
11. ಪ್ರೊಪಗಾಂಡ
12. ಎಜುಕೇಷನಲ್ ಮತ್ತು ಆನಿಮಷನ್

ಅಮೇರಿಕನ್ ಅಥವಾ ವೆಸ್ಟ್ರ್ನ ಪ್ರಬೇಧವು ಹಾಲಿವುಡ್‌ಮ ಕೊಡುಗೆ. ಆದರೂ ಆಂದ್ರೆ ಬೇಸಿನ್ ಹೇಳಿದ ಹಾಗೆ ಪಾಶ್ಚಾತ್ಯ ಚಿತ್ರಗಳು ಇಂದಿಗೂ ಜನ ತಪ್ಪಾಗಿ ಅರ್ಥೈಸಿಕೊಂಡಿರುವ ಚಲನಚಿತ್ರಗಳಲ್ಲಿ ಒಂದು. ಪಾಶ್ಚಾತ್ಯ ಚಲನಚಿತ್ರಗಳು ಕೇವಲ ಮನರಂಜನೆಯ ಮಾಧ್ಯಮ ಎಂಬ ಮಿಥ್ಯ ಪ್ರಚಲಿತದಲ್ಲಿರುವುದರಿಂದ ಅದನ್ನು ಜನರು ತಪ್ಪಾಗಿ ಅರ್ಥೈಸಿರುವುಕ್ಕೆ ಮತ್ತೊಂದು ಕಾರಣ. ಈ ಭ್ರಮೆಯನ್ನು ಪ್ರೇಕ್ಷಕರು ಇನ್ನೂ ಉಳಿಸಿಕೊಂಡಿರುತ್ತಾರೆ. ಆದರೂ ಅನೇಕ ದೇಶಗಳಲ್ಲಿ ವೆಸ್ಟ್ರ್ನ್ ಪ್ರಬೇಧವು ಅತ್ಯಂತ ಜನಪ್ರಿಯವಾಗಿದೆ. ಜಾಗತಿಕವಾಗಿ ಅಂಗೀಕರಿಸಲ್ಪಟ್ಟ ಕೆಲವು ಅಂಶಗಳು ಇದರಲ್ಲಿ ಅಡಗಿರುವುದು ಗೊತ್ತಾಗುತ್ತದೆ. ಕೂಲಂಕುಶವಾಗಿ ಗಮನಿಸಿದರೆ ಆರಂಭದಿಂದ ಅಂತ್ಯದವರೆಗೂ ಅಮೇರಿಕನ್ ಇತಿಹಾಸಕ್ಕೆ ಸಂಬಂಧಿಸಿದ್ದು ಎನ್ನುವುದು ತಿಳಿದುಬರುತ್ತದೆ. ಆದರೆ ಇತ್ತೀಚಿನ ಚಿತ್ರಗಳು ಅಮೇರಿಕನ್ ಚಾಳಿಯನ್ನು ಬಿಟ್ಟು ವಾಸ್ತವವಾದ ಪಾಶ್ಚಾತ್ಯ ಅಂಶಗಳ

ಅನ್ವೇಷಣೆಗೆ ಕೈ ಹಾಕಿವೆ. " ಚಿಸಂ ಮತ್ತು ಮೊಂಟೆ ವಾಲ್ಟ್ ಇದಕ್ಕೆ ಉದಾಹರಣೆಗಳು.

**ಭಾರತದಲ್ಲಿ ಚಲನಚಿತ್ರ ಪ್ರಬೇಧಗಳು**

1) ಭಾಷೆ ಆಧಾರಿತ ಪ್ರಬೇಧ
2) ಎ) ಮುಂಬೈ ಕೇಂದ್ರಿತ ಹಿಂದಿ ಚಿತ್ರಗಳು

**ಉಪವರ್ಗಗಳು**

1. ವಾಣಿಜ್ಯ ಚಿತ್ರಗಳು
2. ಹೊಸ ಅಲೆ ಚಿತ್ರಗಳು
3. ಹಿಂದಿ ಚಲನಚಿತ್ರಗಳ ಗುಣವಿಶೇಷಗಳು

ಜಗತ್ತಿನಲ್ಲಿ ಚಲನಚಿತ್ರದ ನಿರ್ಮಾಣಕರ್ತರೆಂದರೆ ಫ್ರಾನ್ಸ್ ನ ಲುಮಿಯೇರ್ ಸಹೋದರರು. ಅವರ ನಿರ್ಮಾಣದ "ಸಿನಿಮಾಟೋಗ್ರಫಿ" 1895 ಡಿಸೆಂಬರ್ 28 ರಂದು ಪ್ಯಾರಿಸ್‌ನಲ್ಲಿ ಮೊಟ್ಟ ಮೊದಲಬಾರಿಗೆ ಸಾರ್ವಜನಿಕವಾಗಿ ಪ್ರದರ್ಶನಗೊಂಡಿತು. ಬ್ರಿಟನ್, ರಷ್ಯಾ ಮತ್ತು ಅಮೇರಿಕಾದಲ್ಲೂ ಇದರ ಪ್ರದರ್ಶನವಾಯಿತು. ಮುಂದಿನ 6 ತಿಂಗಳುಗಳ ನಂತರ ಅದು ಅಂದರೆ ಜುಲೈ 7 1896 ರಲ್ಲಿ ಭಾರತದ ಮುಂಬೈನಲ್ಲೂ ಪ್ರದರ್ಶನಗೊಂಡಿತು. ಇದರ ಜೊತೆ ಇತರ 6 ಕಿರು ಚಿತ್ರಗಳನ್ನೂ ಪ್ರದರ್ಶಿಸಲಾಯಿತು. ವಾಸ್ತವ ದೃಶ್ಯಗಳ ದಾಖಲೆಯ ತುಣುಕುಗಳಾಗಿದ್ದ ಸಿನಿಮಾಕ್ಕೆ ಕಾಲ್ಪನಿಕತೆ ಸೇರಿಕೊಂಡಿತು. 1903 ರಲ್ಲಿ ಅಮೇರಿಕ ಎಡ್ವಿನ್ ಪೋರ್ಟರ್ ಎಂಬಾತ "ದ ಗ್ರೇಟ್ ಟ್ರೇನ್ ರಾಬರಿ" ಎಂಬ ಚಿಕ್ಕ ಕಥಾಚಿತ್ರ ನಿರ್ಮಿಸಿದ. 1907 ರಲ್ಲಿ ಫ್ರಾನ್ಸ್‌ನಲ್ಲಿ ಕಾರ್ಟೂನ್ ಚಿತ್ರಗಳು ಹುಟ್ಟಿಕೊಂಡವು. ಡೇವಿಡ್ ವಾರ್ಕ ಗ್ರಿಫಿತ್ ಎಂಬ ಅಮೇರಿಕದ ನಿರ್ದೇಶಕ "ಬರ್ಥ ಆರ್ಫ ನೇಷನ್" (1915) ಇನ್‌ಟಾಲರನ್ಸ್ ಚಿತ್ರವನ್ನು 1919 ರಲ್ಲಿ ನಿರ್ಮಿಸಿದನು. ಚಾರ್ಲಿಚಾಪ್ಲಿನ್ ಎಂಬಾತ 1911 ರಲ್ಲಿ ಇಮ್ಮಿಗ್ರಾಂಟ್ ಎಂಬ ಚಿತ್ರವನ್ನು 1918 ರಲ್ಲಿ ಶೋಲ್ಡರ್ ಆರ್ಮ್ಸ್ ಎಂಬ ಎರಡು ಚಿತ್ರಗಳನ್ನು ತಯಾರಿಸಿದನು. ಚಲನಚಿತ್ರ ಒಂದು ಭಾಷೆಯಾಗಿ ಸಂಪರ್ಕ ಮಾಧ್ಯಮವಾಗಿ ರೂಪುಗೊಳ್ಳುತ್ತಿದ್ದ ಆ ಕಾಲದಲ್ಲಿ ತಾಂತ್ರಿಕ ದೃಷ್ಟಿಯಿಂದ ಬಹಳಷ್ಟು ಸಾಧನೆಗಳಾದವು. ಕ್ಯಾಮರಾವನ್ನು ಸ್ಥಿರವಾಗಿಟ್ಟುಕೊಂಡು ಛಾಯಾಗ್ರಹಣದ ಕಾರ್ಯವನ್ನು ಅದನ್ನು ವಿವಿಧ ರೀತಿಗಳಲ್ಲಿ ಚಲಿಸುತ್ತಾ ಚಿತ್ರೀಕರಿಸುವುದನ್ನು ಕಲಿತರು. ಅನಂತರ, 1928 ರ ನಂತರ ದೃಶ್ಯಭಾಷೆಗೆ, ಶ್ರವಣ ಭಾಷೆಯನ್ನು ಸೇರಿಸಿ ಟಾಕೀ ಚಿತ್ರಗಳು ತಯಾರಾಗತೊಡಗಿದವು. ಇಲ್ಲಿಯವರೆಗಿನ ಕಾಲವನ್ನು ಮೂಕೀ ಚಿತ್ರಗಳ ಸುವರ್ಣಯುಗ ಎಂದು ಕರೆದಿದ್ದಾರೆ. ಅಮೇರಿಕಾದ ರಾಬರ್ಟ್ ಫ್ಲಾಹರ್ಟಿಯ " ಓಚಿಟಿಠಿಞ ಠಜಿ ಣ್ಖಜ ಓಂಡಿಣ್ಖ (1920) ಎಂಬ ಚಿತ್ರ ಈ ಯುಗದ ಮೊದಲ ಕೃತಿಯಾಗಿದೆ. ಎಸ್ಕಮೋ ಜನಜೀವನದ ನೈಜ ಚಿತ್ರವಾದ ಇದು ಮೊಟ್ಟ ಮೊದಲ ಸಾಕ್ಷ್ಯಚಿತ್ರ ಎಂಬ ಹಗ್ಗಳಿಕೆಯನ್ನು ಪಡೆದಿದೆ. ಇದೇ ಕಾಲದಲ್ಲಿ ರಷ್ಯಾ ಮತ್ತು ಅಮೇರಿಕಾದಲ್ಲಿ ಉತ್ತಮ ಕೃತಿಗಳು ಬಿಡುಗಡೆಯಾಗತೊಡಗಿದವು. ಅರದಲ್ಲಿ ಪ್ರಮುಖವೆಂದರೆ, "ಃಚಿಣಣಟಜ್ಝುರಿ ಕಠಣಜಟಇುಟಿ" ಎಂಬ ಮಹಾಕೃತಿಯನ್ನು ರಷ್ಯಾದ ಶ್ರೇಷ್ಠ ನಿರ್ದೇಶಕರಾದ ಸರ್ಗೆಯಿ ಐಸೆನ್‌ಸ್ಟೈನ್ 1925 ರಲ್ಲಿ ನಿಮಿಸಿದರು. ರಷ್ಯಾದ ಮತ್ತೊಬ್ಬ ಉತ್ತಮ ನಿರ್ದೇಶಕ ಪುಡೋವ್‌ಕಿನ್ "ಮದರ್" ಎಂಬ ಚಿತ್ರವನ್ನು ಅದೇ ವರ್ಷ ತಯಾರಿಸಿದರು. ಈ ಎರಡೂ ಕೃತಿಗಳು ಸಿನಿಮಾ ಚರಿತ್ರೆಯ ಮೈಲಿಗಲ್ಲುಗಳಾಗಿವೆ. ಇದೇ ವರ್ಷ ಅಮೇರಿಕಾದಲ್ಲಿ ನಿರ್ದೇಶಕ ಚಾರ್ಲಿಚಾಪ್ಲಿನ್ "ಗೋಲ್ಡ್ ರಷ್" ಎಂಬ ಚಿತ್ರವನ್ನು, ಜರ್ಮನಿಯಲ್ಲಿ ಮುರ್ನವ್ ಎಂಬ ನಿರ್ದೇಶಕ "ಖ್ಜಜ ಐಛಿಣ ಐಚಿಣಾಝು" ಚಿತ್ರವನ್ನು ತಯಾರಿಸಿದ. ಬುನುಯಲ್ ಎಂಬ ನಿರ್ದೇಶಕ "ಗಟಿಝಜುಟಿ ಂಟಿಜಚಿಟಠಣ" ಚಿತ್ರವನ್ನು ಫ್ರಾನ್ಸ್‌ನಲ್ಲಿ ನಿರ್ಮಿಸಿದ. ಡೆನ್‌ಮಾರ್ಕ್‌ನ ಕಾರ್ಲ್‌ಡ್ರೈಯರ್ ನಿರ್ಮಿಸಿದ "ಫ್ಯಾಷನ್ ಆಫ್ ಜೋನ್ ಆಫ್ ಅರ್ಕ್ (1928) ಹಾಗೂ ರಷ್ಯಾದ ಡೋವ್ ಝೂಂಕೋವ್ ನಿರ್ಮಿಸಿದ" ಅರ್ಥ (1930) ಈ ಯುಗದ ಉತ್ತಮ ಧ್ವನಿಪೂರ್ಣ ಕೃತಿಗಳು.

**ಭಾರತಕ್ಕೆ ಚಲನಚಿತ್ರ ಪ್ರವೇಶ**

ಲುಮಿಯೇರ್ ಸಹೋದರರ ಮೊದಲ ಕೃತಿ "ಸಿನಿಮಾಟೋಗ್ರಫಿ" ಪ್ಯಾರೀಸ್‌ನಲ್ಲಿ ಪ್ರದರ್ಶನಗೊಂಡ ಆರು ತಿಂಗಳಬಳಿಕ ಭಾರತಕ್ಕೂ ಬಂದಿತು. ಜುಲೈ 7 1896 ರಂದು ಮುಂಬೈನ್ ವಾಟ್ಸ್‌ನ್ಸ್ ಹೊಟೇಲ್‌ನಲ್ಲಿ 6 ಕಿರು ಚಿತ್ರಗಳು ಪ್ರದರ್ಶನಗೊಂಡವು. ಅವು "ಅರೈವಲ್ ಆಫ್ ಅ ಟ್ರೈನ್" "ದ ಸೀ ಬಾತ್" "ಅ ಡೆಮಾಲಿಷನ್" "ಲಿವಿಂಗ್ ಸದ ಫ್ಯಾಕ್ಟರಿ" "ಲೇಡೀಸ್ ಆಂಡ್ ಸೋಲ್ಡರ್ಸ್ ಆನ್ ವೀಲ್". ಚಲನಚಿತ್ರವನ್ನು ನಿರ್ಮಿಸುವುದರಲ್ಲಿ ಮುಂದಾದ ಮೊದಲ ಬಾರತೀಯನೆಂದರೆ, ಸೇವಾದಾದ ಎಂದು ಬಿರುದು ಗಳಿಸಿದ ಹರಿಶ್ಚಂದ್ರ ಸಖಾರಾಮ್ ಭಟ್ವಾಡೇಕರ್. ಚಲನಚಿತ್ರ ಮತ್ತು ಛಾಯಾ ಚಿತ್ರಗಳ ಸಾಮಗ್ರಿಗಳ ವ್ಯಾಪಾರಿಯಾಗಿದ್ದ ಈತ ಲುಮಿಯೇರ್ ಚಿತ್ರಗಳಿಂದ ಆಕರ್ಷಿತನಾದ. ತನ್ನ ಮೊದಲ ಚಿತ್ರ ಕುಸ್ತಿ ಪಂದ್ಯದ ಚಿತ್ರೀಕರಣವಾಗಿತ್ತು. ಮುಂಬೈನಲ್ಲಿ ಅದರ ಪ್ರದರ್ಶನವಾದ ಬಳಿಕ " ರಿಟರ್ನ್ ಆಫ ರ್‍ಯಾಂಗಲರ್ಸ್ ಪರಾಂಜಪೀ (1901) ಅವನ ಎರಡನೇ ಹಾಗೂ ಪ್ರಥಮ ಬಾರತೀಯ ಸುದ್ದಿ ಚಿತ್ರವಾಗಿತ್ತು. 1897 ರಿಂದ 1911 ರ ವರೆಗೆ ತಯಾರಾದ ಕಿರುಚಿತ್ರಗಳ ಪೈಕಿ ಬಹುಪಾಲು ಸುದ್ದಿ ಮತ್ತು ಸಾಕ್ಷ್ಯ ಚಿತ್ರಗಳಾಗಿದ್ದವು. ಮುಂಬೈ ಮತ್ತು ಕಲ್ಕತ್ತಾ ಚಲನಚಿತ್ರ ತಯಾರಿಕೆಯ ಕೇಂದ್ರಗಳಾಗಿದ್ದವು. ಲೈಫ್ ಆಫ್ ಕ್ರಿಸ್ಟ್ ವಿದೇಶಿ ಚಿತ್ರವನ್ನು ನೋಡಿದ ಪ್ರೇರಣೆಯಿಂದ ಚಲನಚಿತ್ರ ರಂಗಕ್ಕೆ ಧುಮುಕಿದ ಪ್ರಥಮ ಭಾರತೀಯನೆಂದರೆ ದುಂಡಿರಾಜ್ ಗೋವಿಂದ್ ಫಾಲ್ಕೆ. 13 ಮೇ 1913 ಎಂದು ತಾನು ನಿರ್ಮಿಸಿದ ಮೊದಲ ಕಥಾ ಚಿತ್ರ "ರಾಜಾ ಹರಿಶ್ಚಂದ್ರ" ಅನಂತರದ ಅವರೇ ನಿರ್ಮಿಸಿದ ಭಸ್ಮಾಸುರ ಮೋಹಿನಿ, ಕೃಷ್ಣಜನ್ಮ, ಲಂಕಾದಹನ, ಕಾಳಿಯಮರ್ದನ, ಸತ್ಯವಾನ್ ಸಾವಿತ್ರಿ, ಚಿತ್ರಗಳ ಸರಮಾಲೆಯನ್ನೇ ರೂಪಿಸಿ ಯಶಸ್ಸು ಕಂಡರು. ಫಾಲ್ಕೆ ಅವರ ಸಾಧನೆಯಿಂದ ಚಿತ್ರರಂಗವು ಒಂದು ಉದ್ಯಮವಾಗಿ ಬೆಳದು, ಬೇರೆಯವರನ್ನೂ ಆಕರ್ಷಿಸಿತು. ಫಾಲಕೆಯವರ ಕೃತಿಗಳ ಗುಣ ವಿಶೇಷಗಳೆಂದರೆ, ಅವರ ಚಿತ್ರ ಕೌಶಲ್ಯ ಮತ್ತು ದೃಶ್ಯ ಗುಣಗಳಿಂದಕೂಡಿದ್ದು ಚಿತ್ರದ ಎಲ್ಲಾ ಹಂತಗಳಲ್ಲೂ ತನ್ನನ್ನು ಸಕ್ರೀಯವಾಗಿ ತೊಡಗಿಸಿಕೊಂಡಿರುವಂಥದ್ದು.

ವಿದೇಶಿ ಚಿತ್ರಗಳನ್ನು ವೀಕ್ಷಿಸಿ ರೂಢಿಯಾಗಿದ್ದ ಭಾರತೀಯ ಪ್ರೇಕ್ಷಕರು ಫಾಲ್ಕೆಯವರ ಚಿತ್ರಗಳ ಮೂಲಕ ತಮ್ಮದೇ ಪರಿಸರದ, ಜೀವನ ಅನುಭವಗಳ ಕುರಿತ ಚಿತ್ರಗಳನ್ನು ನೋಡಿ ಆನಂದ ಪಡುವಂತಾಯಿತು. 1912 ರಿಂದ 1930 ರ ವರಗಿನ ಘಟ್ಟ ಚಲನಚಿತ್ರ ಉದ್ಯಮದ ದೃಷ್ಟಿಯಿಂದ ದೊಡ್ಡ ಸಾಧನೆಗಳಿಂದ ಕೂಡಿದ್ದು ಭಾರತೀಯ ಚಲನಚಿತ್ರರಂಗದ ಇತಿಹಾಸದಲ್ಲಿ ಸ್ಮರಣೀಯವಾದ್ದು. ಈ ಕಾರ್ಯದಲ್ಲಿ ಫಾಲ್ಕೆಯವರ ನಂತರ ಬರುವ ಪ್ರಮುಖರೆಂದರೆ ಧಿರೇನ್ ಗಂಗೂಲಿ, ದೇಬಕಿಕುಮಾರ್ ಬೋಸ್ ಮತ್ತು ಚಂದೂಲಾಲ್ ಷಾ. ಆ ಕಾಲದ ಕೆಲವಾರು ಚಿತ್ರಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿಮನ್ನಣೆಯನ್ನೂ ಪಡೆದಿದ್ದವು. ಕಥಾ ಚಿತ್ರಗಳು ಹುಟ್ಟಿಕೊಂಡ ಹೊಸತರಲ್ಲಿ ಪೌರಾಣಿಕ ಚಿತ್ರಗಳದೇ ಮೇಲುಗೈ. 1920 ಎ ದಶಕದಲ್ಲಿ ಸಾಮಾಜಿಕ ಚಿತ್ರಗಳ ನಿರ್ಮಾಣ ಆರಂಭವಾಯಿತು. ಕ್ರಮೇಣ ಚಾರಿತ್ರಿಕ ಚಿತ್ರ ನಮೂನೆಗಳು ಹುಟ್ಟಿಕೊಂಡವು. 1925 ರಲ್ಲಿ ಬಾಬುರಾವ್ ಪೇಂಟರ್ ಎಂಬ

ಬಹುಮುಖ ಪ್ರತಿಭಾವಂತ "ಸವ್ಕಾರಿ ಪಾಶ್" ಚಿತ್ರವನ್ನು ನಿರ್ಮಿಸಿದ. ಭೂಮಾಲಿಕರ ಸಾಲದ ಜಾಲದಲ್ಲಿ ಸಿಕ್ಕಿ ನರಳಾಡುವ ಬಡರೈತರ ಬವಣೆಯ ಕಥಾವಸ್ತವನ್ನು ಇದು ಹೊಂದಿತ್ತು. ಇದು ಸಹಜ ಶೈಲಿಯ ಸಾಮಾಜಿಕ ವಿಮರ್ಶೆಯುಳ್ಳ ಪ್ರಾಯೋಗಿಕ ಚಿತ್ರವೆಂದು ಮನ್ನಣೆ ಪಡೆಯಿತು. ಅಂತಹ ಇನ್ನೊಂದು ಸ್ಮರಣೀಯ ಚಿತ್ರವೆಂದರ ವಿದೇಶಿ ಸಹಭಾಗಿತ್ವದಲ್ಲಿ ಹಿಮಾಂಶು ರೈ ನಿರ್ಮಿಸಿದ "ದ ಲೈಟ್ ಆಫ್ ಆಸಿಸ್" (1925)ಇದು ಬುದ್ಧನ ಸಂದೇಶವನ್ನು ಆಧರಿಸಿದ ಚಿತ್ರವಾಗಿತ್ತು.

ಭಾರತದಲ್ಲಿ ಬಿಡುಗಡೆಯಾದ ಪ್ರಥಮ ಟಾಕಿ ಚಿತ್ರ "ದಿ ಮೆಲೋಡಿ ಆಫ್ ಲವ್" (1929) ಈ ಚಿತ್ರ ಪ್ರದರ್ಶನಗೊಂಡ ಎರಡು ವರ್ಷಗಳಲ್ಲೇ ಅಂದರೆ ಮಾರ್ಚ 14 1931 ರಲ್ಲಿ ಮೊದಲ ಭಾರತೀಯ ಟಾಕಿ ಚಿತ್ರ "ಅಲಂ ಅರಾ" ಬಿಡುಗಡಯಾಗಿ ಮಾತನಾಡುವ, ಹಾಡುವ, ಕುಣಿಯುವ ಭಾರತೀಯ ಚಿತ್ರಗಳ ಹೊ ಪರಂಪರೆಯನ್ನೇ ಸೃಷ್ಟಿಸಿತು. ಮೂಕಿ ಯುಗದ ಶೇಕಡಾ 87 ರಷ್ಟು ಪ್ರದರ್ಶನ ಕಾಲವನ್ನು ಆಮವು ವಿದೇಶಿ ಚಿತ್ರಗಳು ಅಮೇರಿಕಾ ಹಂಚಿಕೆಯ ಹಾಲಿವುಡ್ ಚಿತ್ರಗಳು ದೇಶಿ ಚಿತ್ರಗಳ ಈ ಅತಂತ್ರ ಸ್ಥಿತಿಯನ್ನು ಮನಗಂಡ ರಂಗಾಚಾರಿ ಆಯೋಗ (1927–28) ಕೋಟಾ ವ್ಯವಸ್ಥೆಯನ್ನು ಶಿಫಾರಸ್ಸು ಮಾಡಿತ್ತು. ಕ್ಷೀಣವಾಗುತ್ತಿದ್ದ ಭಾರತದ ಚಲನಚಿತ್ರೋದ್ಯಮಕ್ಕೆ ಅನಿರೀಕ್ಷಿತವಾಗಿ ಹೊಸ ಜೀವ ಬಂದಿತು. ಚಲನಚಿತ್ರಗಳಿಗೆ ಧ್ವನಿ ಪೂರ್ಣವಾದದ್ದು ಭಾರತೀಯ ಚಲನಚಿತ್ರರಂಗದಲ್ಲಿ ಕ್ರಾಂತಿಯನ್ನೇ ತಂದಿತು. ಬಾರತದಲ್ಲಿ ಪ್ರಾದೇಶಿಕ ಚಿತ್ರಗಳನ್ನು ತಯಾರಿಸುವ ಅಗತ್ಯ ಕಂಡು ಬಂದಿತು. 1913 ರಿಂದ 1934 ರ ಮೂಕಿ ಯುಗದ ಈ ಅವಧಿಯಲ್ಲಿ 1268 ಕಥಾ ಚಿತ್ರ ಮತ್ತು ಹಲವಾರು ಕಿರು ಚಿತ್ರಗಳು ತಯಾರಾದವು. ಅದೇ ಟಾಕಿ ಯುಗದ ಆರಂಭದ ದಶಕದಲ್ಲಿ ಹದಿಮೂರು ಭಾಷೆಗಳಲ್ಲಿ ತಯಾರಾದ ಒಟ್ಟು ಚಿತ್ರಗಳ ಸಂಖ್ಯೆ ಕೇವಲ 15.

**ಭಾರತೀಯ ಚಿತ್ರರಂಗದ ಸ್ವಣ ಯುಗ (1930–1946)**

ಭಾರತದಲ್ಲಿ ಚಲನಚಿತ್ರಗಳ ನಿರ್ಮಾಣದ ದೃಷ್ಟಿಯಿಂದ 1930 ರಿಂದ 1946 ರ ಕಾಲಾವಧಿಯನ್ನು ಭಾರತೀಯ ಸಿನಿಮಾದ ಸ್ವರ್ಣಯುಗವೆಂದು ಚಲನಚಿತ್ರ ಇತಿಹಾಸಕಾರರು ಪರಿಗಣಿಸುತ್ತಾರೆ. ಸಿನಿಮಾದ ಹಲವು ಮೂಲತಃ ವೈಶಿಷ್ಟ್ಯಮಯವಾದ ಗುಣಗಳನ್ನು ಸೃಜನಾತ್ಮಕವಾಗಿಯೂ ಹಾಗೂ ಸಮೂಹ ಮಾಧ್ಯಮವಾಗಿಯೂ ಉಪಯೋಗಿಸಿಕೊಳ್ಳುವ ಪ್ರಯತ್ನಗಳೂ ನಡೆದವು. ಈ ನಿಟ್ಟಿನಲ್ಲಿ ಯಶಸ್ಸು ಕಾಣತೊಡಗಿದ ಚಿತ್ರರಂಗ, ಸಾಮಾಜಿಕ ಪ್ರಜ್ಞಾ ಕೃತಿಗಳನ್ನೂ, ಆಂದೋಲನಾತ್ಮಕ ಚಿತ್ರಗಳನ್ನು ಹೊರತಂದಿತು. ವಸ್ತುವಿನ ದೃಷ್ಠಿಯಿಂದ ಗಂಭೀರ ಮತ್ತು ಅರ್ಥಪೂರ್ಣ ಚಿತ್ರಗಳ ಸಂಖ್ಯೆ ನಿಧಾನವಾಗಿ ಹೆಚ್ಚಲಾರಂಭಿಸಿತು. ಸಿನೆಮಾ ಸಂಸ್ಕೃತಿ, ಅಭಿರುಚಿ, ರಸಗ್ರಹಿಕೆ, ನಿಧಾನವಾಗಿ ಜನರಲ್ಲಿ ಮೂಡತೊಡಗಿದವು. ಇದರಲ್ಲಿ ಆಸಕ್ತ ವಿದ್ಯಾವಂತ ಜನರು ಸಕ್ರೀಯವಾಗಿ ತಮ್ಮನ್ನು ತೊಡಗಿಸಿಕೊಂಡರು. ತಂತ್ರಜ್ಞರು ಮತ್ತು ಕಲಾವಿದರ ಸಂಖ್ಯೆ ಬೆಳೆಯಿತು. ಎಲ್ಲಾ ಸೌಲಭ್ಯ ಇರುವ ಸಂಸ್ಥೆಗಳು ಹುಟ್ಟತೊಡಗಿದವು. ಇವುಗಳ ಪೈಕಿ ಅಗ್ರಗಣ್ಯವಾದ ಮೂರು ಸಂಸ್ಥೆಗಳೆಂದರೆ ಕಲ್ಕತ್ತೆಯ "ನ್ಯೂ ಥಿಯೇಟರ್ಸ್," ಬಾಂಬೆಯ ಬಾಂಬೆ ಟಾಕೀಸ್ "ಮತ್ತು ಕೊಲ್ಹಾಪುರದ" ಪ್ರಭಾರ್". ಈ ಸಂಸ್ಥೆಗಳಿಂದ ಹುಟ್ಟಿಬಂದ ಪ್ರತಿಬಾವಂತರ ಪಟ್ಟಿ ಹೀಗಿದೆ. ನಿರ್ಮಾಪಕ ಬಿ.ಎನ್. ಸರಕಾರ್, ನಿರ್ದೇಶಕ, ನಟಧಿರೇನ್ ಗಂಗೂಲಿ, ನಿರ್ದೇಶಕ ದೇಬಕಿ ಬೋಸ್, ನಿರ್ದೇಶಕ–ನಟ ಪಿ.ಸಿ. ಬರೂವ: ಲೇಖಕ ನಿರ್ದೇಶಕ ಕಿದಾರ್ ಶರ್ಮಾ, ನಿರ್ದೇಶಕ ಬಿಮಲ್ ರಾಯ್, ನಟ–ನಿರ್ದೇಶಕ ವಿ. ಶಾಂತಾರಾಂ; ಬಹುಮುಖ ಪ್ರತಿಭಾವಂತ ಬಾಬುರಾವ್ ಪೇಂಟರ್, ನಿರ್ದೇಶಕ ಹಿಮಾಂಶು ರೈ; ನಟ ಪೃಥ್ವಿರಾಜ್ ಕಪೂರ್; ನಟ ಕೆ.ಎಲ್. ಸೈಗಲ್;ನಟ ಅಶೋಕಕುಮಾರ್; ನಟಿ ದೇವಿಕಾ ರಾಣಿ; ಕಾನನ್ ದೇವಿ; ಲೀಲಾ ಚಟ್ನೀಸ್; ಲೀಲಾ ದೇಸಾಯಿ ಮತ್ತು ನೂರ್ ಜಹಾನ್ ಮುಂತಾದವರು.

ಭಾರತಕ್ಕೆ 1947 ರಲ್ಲಿ ಸ್ವಾತಂತ್ರ್ಯ ಬಂದಾಗ ಅರ ಪರಿಣಾಮಗಳು ದೇಶದ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ನೆಲೆಗಟ್ಟುಗಳನ್ನು ಅಸ್ತವ್ಯವಸ್ತಗೊಳಿಸಿದವು. ಸಿನಿಮಾ ಅಂದರೆ ಕೇವಲ ಮನರಂಜನೆ ಎಂದು ಆಗಿನ ರಾಷ್ಟ್ರ ನಾಯಕರು ಭಾವಿಸಿದ್ದರು. ಇದರಿಂದಾಗಿ ಚಿತ್ರೋದ್ಯಮದ ಮೇಲ ಮೀತಿಮೀರಿದ ಕರವನ್ನು ವಿಇಸಿದರು. ಇನ್ನೊಂದೆಡೆ ಕಪ್ಪು ಹಣದ ಭೂತ ಚಿತ್ರೋದ್ಯಮವನ್ನು ನಿಯಂತ್ರಿಸುತ್ತಿತ್ತು. ಯಾವ ಅರ್ಹತೆಯೂ ಇಲ್ಲದ, ಕಪ್ಪುಹಣದ ಪ್ರಭಾವೀ ಗುಂಪು ಇಡೀ ಚಿತ್ರೋದ್ಯಮವನ್ನ ನುಂಗುವ ಹವಣಿಕೆಯಲಿದ್ದ ಕಾಲ ಅದು. ಪ್ರಾಮಾಣಿಕ, ಸೃಜನಾತ್ಮಕ, ಪ್ರತಿಬಾನ್ವಿತ ಕೆಲಸಗಾರರಿಗೆ ಉಸಿರುಕಟ್ಟುವ ವಾತವರಣ ನಿರ್ಮಾಣವಾಗಿತ್ತು. ಪ್ರಸಿದ್ಧ ಚಿತ್ರ ಸಂಸ್ಥೆಗಳು ತಮ್ಮ ಅಸ್ತಿತ್ವವನ್ನೇ ಕಳೆದು ದಿವಾಳಿಯಾಗುವ ಅಂಚಿನಲ್ಲಿದ್ದವು. ಸಹಜ ಮತ್ತು ಅನಿವಾರ್ಯವೆಂಬಂತೆ ಸಿನಿಮಾ ಕಲೆಯ ಮೌಲ್ಯಗಳು ಅನವತಿಯ ಹಾದಿ ಹಿಡಿಯತೊಡಗಿದವು. ಈ ಕರಾಳ ಯುಗದಲ್ಲೂ ಸಹ್ಯವಾದ ಚಿತ್ರಗಳನ್ನು ನೀಡಿದವರೆಂದರೆ, ವಿ. ಶಾಂತಾರಾಂ, ಬಿಮಲ್ ರಾಯ್, ಕೆ.ಎ.ಅಬ್ಬಾಸರ, ಚೇತನ್ ಆನಂದ್ ರಾಜ್‌ಕಪೂರ್, ಗುರುದತ್ ರಂತಹ ನಿರ್ದೇಶಕರು. ದೊಡ್ಡ ಬಡ್ಜೆಟ್ ತಾರಾಗಣದ, ಗಲ್ಲಾಪೆಟ್ಟಿಗೆಯ ಯಶಸ್ಸನ್ನೇ ಮುಖ್ಯ ಉದ್ದೇಶಗಳುಳ್ಳ ಮನರಂಜನಾ ಪ್ರಧಾನ ಚಿತ್ರಗಳನ್ನು ತಯಾರಿಸುವಲ್ಲಿ ಮದ್ರಾಸ್ ಸಹ ಬಾಂಬೆಯ ಜಾಡನ್ನೇ ಹಿಡಿಯಿತು. ಇದಕ್ಕೆ ಹೊರತಾಗಿ ಬಂಗಾಳ ಮಾತ್ರ ಸತ್ಯಜಿತ್ ರಾಯ್, ಮೃಣಾಲ್ ಸೇನ್, ರಿತ್ವಿಕ್ ಘಟಿಕ್, ತಪನ್ ಸಿನ್ಹಾ, ತರುಣ್ ಮಜುಂದಾರ್ ಮುಂತಾದವರು ಚಿತ್ರ ವ್ಯಕ್ತಿಗಳನ್ನು ನೀಡಿತು. ಇವರ ಪೈಕಿ. ಭಾರತೀಯ ಚಿತ್ರರಂಗವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆಯನ್ನು ತಂದುಕೊಟ್ಟ ಏಕೈಕ ವ್ಯಕ್ತಿಯೆಂದರೆ ಅವರೇ ಸತ್ಯಜಿತ್ ರಾಯ್. ಚಲನಚಿತ್ರ ಕಲೆ ಕುರಿತ ಶ್ರೇಷ್ಠ ಬರವಣಿಗೆಗಳು ಮತ್ತು ಉತ್ಕೃಷ್ಟ ಚಲನಚಿತ್ರಗಳನ್ನು ದೀರ್ಘಕಾಲ ಅಭ್ಯಾಸ ಮಾಡುವುದರ ಮೂಲಕ ಚಲನಚಿತ್ರ ಮಾಧ್ಯಮದ ಗುಣ ಸ್ವಭಾವಗಳನ್ನು ಇವರು ಅರಿತರು. ಸೂಕ್ಷ್ಮವಾದ ಅನೇಕ ಸಿದ್ಧತೆಗಳನ್ನು ಮಾಡಿಕೊಂಡು ಮಿತ್ರರ ನೆರವಿನಿಂದ ತಮ್ಮ ಚೊಚ್ಚಲ ಚಿತ್ರ "ಪಥೇರ್ ಪಾಂಚಾಲಿ" ಯ ನಿರ್ಮಾಣವನ್ನು 1950 ರಲ್ಲಿ ಪ್ರಾರಂಭ ಮಾಡಿದರು. ಈ ಚಿತ್ರ 1955 ರಲ್ಲಿ ಬಿಡುಗೆಗೊಂಡಿತು. ನಿಜವಾದ ಭಾರತೀಯ ಸಂವೇದನೆಯನ್ನು ಸಿನಮಾ ಬಂಧನದಲ್ಲಿ ಅಭಿವ್ಯಕ್ತಿಗೊಳಿಸಿದ ಅಪೂರ್ವ ಕಲಾಕೃತಿ ಇದಾಗಿತ್ತು. ಈ ಚಿತ್ರಕೃತಿ ಪ್ರಪಂಚದೆಲ್ಲೆಡೆ ಪ್ರಜ್ಞಾವಂತ ಸಿನಿಮಾ ಪ್ರೇಕ್ಷಕರ ಮನಸ್ಸನ್ನು ಸೂರೆಮಾಡಿತು. 1956 ರ ಕ್ಯಾನೆ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಅತ್ಯುತ್ತಮ ಮಾನವೀಯ ದಾಖಲೆ ಎನ್ನುವ ವಿಶೇಷ ಪ್ರಶಸ್ತಿಗೆ ಇದು ಪಾತ್ರವಾಯಿತು. ಇದನ್ನು ಅನುಸರಿಸಿಕೊಂಡು ಹಲವಾರು ಅಂತಾರಾಷ್ಟ್ರೀಯ ಪ್ರಶಸ್ತಿಗಳು ಈ ಚಿತ್ರಕ್ಕೆ ಸಂದವು. ಖ್ಯಾತ ಬಂಗಾಲಿ ಸಾಹಿತಿ ಬಿಭಿತಿ ಭೂಷಣ ಬ್ಯಾನರ್ಜಿಯವರ ಜನಪ್ರಿಯ ಕಾದಂಬರಿಯೊಂದನ್ನು ಆಧರಿಸಿದ ಈ ಚಿತ್ರದ ಕಥೆ ಇನ್ನೆರೆಡು ಚಿತ್ರ ಖಂಡಗಳಾದ ‘ ಅಪರಾಜಿತೋ ’ (1957) ಮತ್ತು ‘ಅಪೂರ್ ಸಂಸಾರ್ ’ (1960) ನಲ್ಲಿ ಮುಗಿಯುತ್ತದೆ. ಚಲನಚಿತ್ರ ಪ್ರವೇಶದ 25 ವರ್ಷಗಳಲ್ಲಿ ಇಪ್ಪತ್ತೈದಕ್ಕೂ ಮಿಕ್ಕಿ ಚಿತ್ರಗಳನ್ನು ನೀಡಿರುವ ರಾಯ್, ಚಲನಚಿತ್ರ ಜಗತ್ತಿನ ಅಗ್ರಗಣ್ಯ ನಿರ್ದೇಶಕರ ಪೈಕಿ ಒಬ್ಬರಾಗಿದ್ದಾರೆ. ಸತ್ಯಜಿತ್ ರಾಯ್‌ಗಿಂತ ಪೂರ್ವದಲ್ಲಿ ಕೆಲವಾರು ಹೆಸರುಗಳು ಭಾರತದ ಚಲನಚಿತ್ರ ಇತಿಹಾಸದಲ್ಲಿ ಮಹತವವನ್ನು ಪಡೆಯುತ್ತವೆಯಾದರೂ, ರಾಯ್ ಹಾಗೆ ಇವರ್ಯಾರೂ ಕಲೆಯಾಗಿ ಈ ಮಾಧ್ಯಮವನ್ನು

ಇಡೀಯಾಗಿ ಸಾಕ್ಷಾತ್ಕರಿಸಿಕೊಂಡಿರಲಿಲ್ಲ. ಇವರ ಪೈಕಿ ಫಾಲ್ಕೆಯವರ 'ಜನಪ್ರಿಯ ಚಲನಚಿತಯ್ರ ' ನಮೂನೆಯನ್ನೇ ಮಾದರಿಯಾಗಿಟ್ಟುಕೊಂಡು ಚಿತ್ರ ತಯಾರಿಸಿವರು ಅನೇಕರು. ಇವರೆಲ್ಲರ ಪಾಲಿಗೆ ಸಿನಿಮಾವು ಚಿತ್ರೀಕರಿಸಿದ ಕಾದಂಬರಿಯೋ ಅಲ್ಲ ರಂಗಭೂಯಿಯೋ ಆಯಿತಲ್ಲದೆ ಸ್ವತಂತ್ರ ಕಲಾಮಾಧ್ಯಮವಾಗಲಿಲ್ಲ. ಈ ಎಲ್ಲಾ ವರ್ಷಗಳಲ್ಲಿ ಭಾರತೀಯ ಚಿತ್ರವು ಅಂತಾರಾಷ್ಟ್ರೀಯ ಸಿನಿಮಾ ಸಂಸ್ಕೃತಿಯೊಡನೆ ಯಾವ ಬಗೆಯ ಸಂಪರ್ಕವನ್ನು ಪಡೆಯದೆ ಬೆಳೆದದ್ದು ಚಲನಚಿತ್ರ ಕಲೆಯ ಈ ಅಪಮೌಲ್ಯಕ್ಕೆ ಮುಖ್ಯ ಕಾರಣವಾಗಿರುವುದು. ಸಮೂಹ ಮನರಂಜನೆಯ ಗುರಿಯಾಗಿರುವ ಭಾರತೀಯ ಸಿನಿಮಾ ಸಂಪ್ರದಾಯದಿಂದ ಸಿಡಿದೆದ್ದು ಚಿತ್ರ ನಿರ್ಮಿಸಿದ ಮೊದಲಿಗರೆಂದರೆ ಅವರೇ ಸತ್ಯಜಿತ್ ರಾಯ್.

"ಲೂಮಿಯೆರ್ ಸಹೋದರರಿಂದ ಸ್ಪಿಲ್‌ಬರ್ಗ್‌ರವರೆಗೆ ಅಥವಾ ದಾದಾ ಸಾಹೇಬ್ ಫಾಲ್ಕೆಯಿಂದ ಬಿ.ಆರ್.ಚೋಪ್ರಾವರೆಗೆ ಎಲ್ಲಾ ಚಿತ್ರ ನಿರ್ಮಾಪಕರ ಮುಖ್ಯ ಉದ್ದೇಶ, ಪ್ರೇಕ್ಷಕರ ಅವರ ಅಭಿರುಚಿ, ಆಸಕ್ತಿ ಮತ್ತು ಜ್ಞಾನಕ್ಕೆ ತಕ್ಕುದಾದ ಚಿತ್ರವನ್ನು ನೀಡಿ ಅವರಿಗೆ ಮೋಡಿ ಹಾಕಿ ಅವರು ಸಂತೃಪ್ತಿಯಿಂದ ಚಿತ್ರಮಂದಿರ ಬಿಡುವಂತೆ ನೋಡಿಕೊಳ್ಳುವುದು ಮತ್ತು ಸಾಧ್ಯವಾದರೆ ತಾವು ಮುಂದೆ ತಯಾರಿಸುವ ಸಿನಿಮಾಗಳಿಗೆ ಜನ ಸಾಲು ನಿಲ್ಲುವಂತೆ ಪ್ರಚೋದಿಸಿ ಚಿತ್ರ ನಿರ್ಮಾಣ ಮಾಡಿ ಕಳುಹಿಸುವುದು." ಜನರಿಗೆ ಕನಸುಗಳು ಬೇಕು, ಅದನ್ನು ನಿರ್ಮಿಸಿ ಜನರಿಗೆ ತಲುಪಿಸುತ್ತೇನೆ ಎಂದು ಹೆಸರಾಂತ ನಿರ್ಮಾಪಕ ನಿರ್ದೇಶಕ ರಾಜ್‌ಕಪೂರ್ ಹೇಳಿದ್ದ ಮಾತು ಇಂದು ಕೂಡ ಪ್ರಸ್ತುತ. ಜನರು ಕನಸುಗಳನ್ನು ಕಾಣುವುದು ಮತ್ತು ಚಿತ್ರ ನಿರ್ಮಾಪಕರು ಕನಸುಗಳನ್ನು ನಿರ್ಮಿಸುವುದು ತಪ್ಪಿಲ್ಲ. ವ್ಯಾಪಾರಿ ಮನೋಧರ್ಮದಿಂದ ಚಲನಚಿತ್ರ ತಯಾರಿಸುವುದು ಪಾಪಕೃತ್ಯ ಎಂದು ಯಾರೂ ಭಾವಿಸಿಲ್ಲ. ಬಹುತೇಕ ಚಲನಚಿತ್ರಗಳು ಮಿಥ್ಯಗಳು ಮತ್ತು ಸಿದ್ಧಸೂತ್ರಗಳನ್ನು ಅವಲಂಬಿಸಿವೆ. ಚಲನಚಿತ್ರ ಮಾಧ್ಯಮ ಇತರೆ ಸಂವಹನ ಮಾಧ್ಯಮಗಳಿಗಿಂತ ಹೆಚ್ಚಾಗಿ ಪ್ರೇಕ್ಷಕರನ್ನು ಅವಲಂಬಿಸಿರುವುರಿಂದ ಇಂದಿನ ಚಲನಚಿತ್ರ ನಿರ್ದೇಶಕರು ಮತ್ತು ನಿರ್ಮಾಪಕರು ಪ್ರೇಕ್ಷಕರ ಆಸಕ್ತಿ ಮತ್ತು ಅಭಿರುಚಿಗಳನ್ನು ಹೊರತು ಪಡಿಸಿ ಚಲನಚಿತ್ರ ನಿರ್ಮಿಸುವ ಸ್ಥಿತಿಯಲ್ಲಿಲ್ಲ. ಟೆಲಿವಿಷನ್ ಮಾಧ್ಯಮ ಇಂದು ತನ್ನದೆ ಆದ ಬೆಡಗು ಬಿನ್ನಾಣಗಳಿಂದ ಪ್ರೇಕ್ಷಕರನ್ನು ತನ್ನತ್ತ ಸೆಳೆದುಕೊಳ್ಳುತ್ತಿದೆ. ತನ್ನ ಉಳಿವಿಗಾಗಿ ಚಲನಚಿತ್ರ ಮಾಧ್ಯಮ ಹೆಚ್ಚಾಗಿ ವ್ಯಾಪಾರಿ ಮನೋಧರ್ಮ, ಮಿಥ್ಯೆಗಳು ಮತ್ತು ಸಿದ್ಧಸೂತ್ರಗಳನ್ನು ಅವಲಂಭಿಸುವುದು ಅನಿವಾರ್ಯವಾಗಿದೆ. ಈ ಎಲ್ಲಾ ಇತಿಮಿತಿಗಳ ನಡುವೆಯೂ ಬದುಕಿನ ವಾಸ್ತವ ಮತ್ತು ಸಂಕೀರ್ಣತೆಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುವ ಚಲನಚಿತ್ರಗಳಿಗೆ ನಮ್ಮಲ್ಲಿ ಕೊರತೆಯಿಲ್ಲೃಜಣ